ಕಥೆ

# ಕನ್ನಿಮೈ

■ ತಮಿಳು ಮೂಲ: ಕಿ. ರಾಜನಾರಾಯಣನ್
■ ಕನ್ನಡಕ್ಕೆ: ಕೆ. ನಲ್ಲತಂಬಿ
ಕಲೆ: ಎಸ್‌.ವಿ. ಹೂಗಾರ

ಹೇಳಿದರೆ ನಂಬಲು ಅಸಾಧ್ಯ. ನಾಚ್ಚಿಯಾರಮ್ಮಾ ಸಹಾ ಹೀಗೆ ಬದಲಾಗಬಹುದೆಂದು ಅಂದುಕೊಂಡಿರಲಿಲ್ಲ. ಅವಳು ನನ್ನ ಸೋದರಿ. ನಾವು ಎಂಟು ಜನ ಅಣ್ಣ ತಮ್ಮಂದಿರು. 'ಹೆಣ್ಣು ಮಗಳು' ಇಲ್ಲವೆಂದು ನಮ್ಮ ತಾಯಿ ಅವಳನ್ನು ದತ್ತು ಪಡೆದು ತನ್ನ ಮಗಳನ್ನಾಗಿಸಿಕೊಂಡಳು. ಅಮ್ಮನಿಗಿಂತ ನಮಗೇ ಹೆಚ್ಚು ಸಂತೋಷ. ಹೀಗೊಬ್ಬ ಅದ್ಭುತವಾದ ಸೋದರಿ ಯಾರಿಗೆ ದೊರಕುತ್ತಾಳೆ? ರೂಪದಲ್ಲೂ ಸರಿ, ಬುದ್ಧಿವಂತಿಕೆಯಲ್ಲೂ ಸರಿ, ಅವಳಿಗೆ ಸಾಟಿ ಅವಳೇ. ಅವಳು ದೊಡ್ಡ ಮನುಷ್ಯಳಾಗಿ ನಮ್ಮ ಮನೆಯಲ್ಲಿ ಕನ್ಯೆಯಾಗಿದ್ದ ಆ ದಿನಗಳು ನಮ್ಮ ಕುಟುಂಬದ ಬಂಗಾರದ ದಿನಗಳು. ಅವಳ ಕೈಯಿಂದ ಗಂಜಿ ಸುರಿಸಿಕೊಂಡರೆ ಮಾತ್ರ ಕೆಲಸಗಾರರಿಗೆ ತೃಪ್ತಿ. ತುಂಬ ಮಜ್ಜಿಗೆ ಸುರಿದು ನವಣೆ ಅನ್ನವನ್ನು ಚೆನ್ನಾಗಿ ಹಿಚುಕಿ ಕಲಸಿ, ಮೊಸರು ಮೆಣಸನ್ನು ಎಣ್ಣೆಯಲ್ಲಿ ಪಕ್ವವಾಗಿ ಕರಿದು ತಂದು ಕೊಡುತ್ತಾಳೆ. ಬೋಗುಣಿಯಿಂದ ಕಂಚಿನ ಪಾತ್ರೆಗೆ ಸುರಿಯುವಾಗ, ಆ ಮೊಸರು ಮೆಣಸನ್ನು ತೆಗೆದು ಬಾಯಿಗೆ ಹಾಕಿ ಕರಕರ ಎಂದು ಮೆಲ್ಲುತ್ತಾ ತಲೆಯೆತ್ತಿ ಗಂಜಿಯನ್ನು ಸಂತೋಷದಿಂದ ಅವರು ಬಾಯಿಗೆ ಸುರಿದುಕೊಂಡು ಕುಡಿಯುವುದನ್ನು ನೋಡುವಾಗ, 'ನಾವೂ ಹಾಗೆ ಕುಡಿದರೆ ಚೆನ್ನಾಗಿರಬಹುದಲ್ಲಾ!' ಎಂದು ತೋರುತ್ತದೆ. ಕೆಲವು ದಿನ ಸಣ್ಣ ಹಸಿ ಈರುಳ್ಳಿಯನ್ನು ಸುಲಿದು ತಂದು ನೆಂಚಿಕೊಳ್ಳಲು ಕೊಡುತ್ತಾಳೆ.

ಒಮ್ಮೊಮ್ಮೆ ಹಸಿಮೆಣಸಿನಕಾಯಿ, ಉಪ್ಪು. ಹಸಿಮೆಣಸಿನಕಾಯಿಯ ತೊಟ್ಟನ್ನು ಕಿತ್ತೆಸೆದು ನವಣೆ ಗಂಜಿಯಲ್ಲಿ ಅದ್ದಿ ಅದಕ್ಕೆ ಉಪ್ಪು ಹಚ್ಚಿದಾಗ ಉಪ್ಪು ಅದರ ಮೇಲೆಲ್ಲಾ ಅಂಟಿಕೊಳ್ಳುವುದು. ಅದನ್ನು ಬಾಯಿಗೆ ಹಾಕಿಕೊಂಡು ಕಚಕಚ ಎಂದು ಅಗಿಯುವರು. ಆಗ ಹೊಟ್ಟೆ ಇನ್ನೂ 'ಗಂಜಿ ಬೇಕು, ತಾ' ಎನ್ನುತ್ತದಂತೆ. ರಾತ್ರಿಯಲ್ಲಿ ಅವರಿಗೆ ಬಿಸಿಬಿಸಿಯಾಗಿ ಊದಲು ಅನ್ನ ಹಾಕಿ ಧಾರಾಳವಾಗಿ ಬೇಳೆ ಸಾರು ಬಡಿಸಿ ಅದಕ್ಕೆ ಅಚ್ಚೆಳ್ಳೆಣ್ಣೆಯನ್ನು ಸುರಿಯುತ್ತಾಳೆ. ಹುಣಸೆಹಣ್ಣಿನ ರಸ ಹಾಕಿ ಬೇಯಿಸಿದ ಸಿಹಿಗೆಡ್ಡೆಯನ್ನು ವ್ಯಂಜನವಾಗಿ ತಂದಿಡುತ್ತಾಳೆ. ಎರಡನೆಯ ಸಲ ಅನ್ನ ಬಡಿಸುವಾಗ ಕಂಚಿನ ಪಾತ್ರೆ ತುಂಬ ಸಾರು, ಸಾರಿನಲ್ಲಿ ಚೆನ್ನಾಗಿ ಊರಿ ಮೆತ್ತಗಾದ ಊದಲು ಅಗಳುಗಳನ್ನು ಅವರು ಕೈತುಂಬ ತೆಗೆದು ಉಂಡೆ ಮಾಡಿ ಬಾಯಿಗೆ ಹಾಕಿಕೊಳ್ಳುವರು. ಕೆಲಸಗಾರರಿಗೆ ಮಾತ್ರವಲ್ಲ, ಭಿಕ್ಷುಕರಿಗೂ ನಾಚ್ಚಿಯಾರಮ್ಮಾ ಎಂದರೆ 'ಕುಲದೇವತೆ'. ಅವಳಿಗೆ ಉಳಿದವರು ಹೊಟ್ಟೆ ತುಂಬ ಉಂಡು ಹಸಿವು ಹಿಂಗಿಸಿಕೊಳ್ಳುವುದನ್ನು ನೋಡುವುದರಲ್ಲೇ ಒಂದು ದೈವ ತೃಪ್ತಿ.

ಅವಳು ಮದುವೆ ಮಾಡಿಕೊಂಡು ಅವಳ ಗಂಡನ ಮನೆಗೆ ಹೋದಮೇಲೆ ನಮ್ಮ ನಾಲಿಗೆಗಳು ಸಪ್ಪೆಯಾದವು. ಉನ್ನತ ಜಾತಿಯ ನೆತ್ತಿಲಿ ಮೀನುಗಳ ತಲೆಗಳನ್ನು ಕಿತ್ತುಹಾಕಿ ಖಾರ ಹಚ್ಚಿ ಕರಿದುಕೊಡುವಳು. ನಮಗೆ ಈಗ ಹಾಗೆ ಮಾಡಿಕೊಡುವವರು ಯಾರೂ ಇಲ್ಲ. ಅದನ್ನು ಆ ಬಂಗಾರದ ಬಣ್ಣಕ್ಕೆ ಕರಿದುಕೊಡುವ ಕೈಪಕ್ವ ನಮ್ಮ ಮನೆಯಲ್ಲಿ ಒಬ್ಬರಿಗೂ ಇಲ್ಲ. ಬೇಳೆ ಅನ್ನಕ್ಕೆ ಚಾಕಣ ಕರಿದುಕೊಡುವಳು. ಸಾರಿನ ಅನ್ನಕ್ಕೆ ಮೊಟ್ಟೆ ಬೇಯಿಸಿ ಖಾರ ಹಚ್ಚಿ ಕೊಡುವಳು. ಅಮ್ಮನಿಗೆ ಗೊತ್ತಿಲ್ಲದೆ, ಗಟ್ಟಿ ಬೆಣ್ಣೆಯನ್ನು ತೆಗೆದು ತಿನ್ನಲು ಕೊಡುವಳು.

ಆಗ ಅವಳು ಇದ್ದದ್ದು ನಮ್ಮ ಮನೆ ತುಂಬಿದಂತೆ ಇತ್ತು. ದೀಪದ ತುಂಬು ಬೆಳಕಿನಂತೆ ಮನೆ ಪ್ರಕಾಶವಾಗಿತ್ತು.

ಧನುರ್ಮಾಸ ಬಂದಕೂಡಲೇ ಮನೆಯೊಳಗೂ ಮನೆಯ ಹೊಸಿಲಿನ ಮುಂದೆಯೂ ದಿನಾ ಬಗೆ ಬಗೆಯಾದ ರಂಗೋಲಿ ಹಾಕಿ ಸುಂದರಗೊಳಿಸುವಳು. ಬೆಳಗಿನ ಜಾವದಲ್ಲೇ ಎದ್ದು ಮಿಂದು 'ದಿವ್ಯಪ್ರಬಂಧ'ವನ್ನು ಹಾಡುವಳು. ಈಗಲೂ ಹಲವು 'ತಿರುಪ್ಪಾವೈ' ಪಾಶುರಗಳನ್ನು ನನ್ನಿಂದ ನೋಡದೆ ಹಾಡಲು ಸಾಧ್ಯವಾಗಿರುವುದು ಚಿಕ್ಕ ವಯಸ್ಸಿನಲ್ಲಿ ಅವಳಿಂದ 'ಪ್ರಬಂಧ'ದ ಹಾಡುಗಳನ್ನು ಹಾಡಿಸಿ ಕೇಳಿದ ಅಭ್ಯಾಸ ಬಲದಿಂದ. ಅದು ನಮಗೆಲ್ಲರಿಗೂ ಬಾಯಿಪಾಠವಾಗಿದೆ.

ಆಗ ನಮ್ಮ ಮನೆಯಲ್ಲಿ, ಶ್ರೀ ದೀಪ ಎಂದೊಂದಿತ್ತು. ಅದು ಸಂಪೂರ್ಣವಾಗಿ ಮರದಿಂದಲೇ ಮಾಡಿದ್ದು. ಬಡಗಿ ಅದರ ಮೇಲೆ ಹಲವು ಜಾಗಗಳಲ್ಲಿ ಉಳಿಯಿಂದ ರಂಗೋಲಿಯನ್ನು ಕೆತ್ತಿದ್ದ. ದುಂಡಗೆ ಕಂಬದ ಆಕಾರದಲ್ಲಿ ನಿಂತಿರುವ ಆ ದೀಪದ ದಂಟಿನಲ್ಲಿ ಗರಗಸೆಯ ಹಲ್ಲುಗಳಂತೆ ದೊಡ್ಡ ಹಲ್ಲುಗಳಿದ್ದವು. ಬೇಕಾದ ಎತ್ತರಕ್ಕೆ ಏರಿಸಿ ಇಳಿಸಲು ಅನುಕೂಲವಾಗಿ 'L' ಆಕಾರದ ಮರದ ತುಂಡು ಅದರಲ್ಲಿ ಒಂದು ತೂತು ಕೊರೆದ ಹಲಗೆ. ಆ ಹಲಗೆಯ ಮೇಲೆ ಕೆರಕ ಎನ್ನುವ ಆಕಳಿನ ಸಗಣಿಯ ಉಂಡೆಯಿಟ್ಟು ಅದರ ಮೇಲೆ ಮಣ್ಣಿನ ಹಣತೆಯನ್ನು ಬೆಳಗುತ್ತಿದ್ದರು. ದಿನ ಹಣತೆಯನ್ನು ಹಚ್ಚುವಾಗ ಹಳೆಯ ಸಗಣಿ ಉಂಡೆಯನ್ನು ತೆಗೆದು ಹೊಸದಾಗಿ ಉಂಡೆ ಕಟ್ಟಿ ಇಡುತ್ತಿದ್ದರು. ನಂತರ ಒಂದು ವ್ಯಾಸ ಪೀಠದ ಮೇಲೆ ದಪ್ಪನೆಯ 'ಕಂಬ ರಾಮಾಯಣ' ಗ್ರಂಥವನ್ನು ಇಟ್ಟುಕೊಂಡು ಇಡೀ ರಾತ್ರಿ ಹೆಂಗಸರು ಸುತ್ತುವರೆದು ಕುಳಿತಿರಲು ಇವಳು ಉಚ್ಚ ಸ್ಥಾಯಿಯಲ್ಲಿ ರಾಗವಾಗಿ ಓದುವಳು. ಹಾಗೆ ಓದುತ್ತಿರುವಾಗ ಇವಳೂ ಉಳಿದ ಹೆಂಗಸರೂ ಕಣ್ಣೀರು ಸುರಿಸುವರು. ಕಣ್ಣೀರನ್ನು ಒರೆಸುತ್ತಲೇ ಗದ್ಗದ ದನಿಯಲ್ಲಿ ಮತ್ತೆ ರಾಗ ಬೆರಸಿ ಹಾಡುವಳು. ಅವರು ಕಣ್ಣೀರು ಸುರಿಸುವ, ಮೂಗು ಸೋರಿಸುವ ದೃಶ್ಯಗಳನ್ನು ನಾನು ಹಾಸಿಗೆಯ ಮೇಲೆ ಮಲಗಿಕೊಂಡು ಸುಮ್ಮನೆ ನೋಡುತ್ತಿದ್ದೆ.



ಅವಳು ಓದುವುದನ್ನು ನನ್ನ ಕಿವಿಗಳು ಕೇಳಿಸಿಕೊಳ್ಳದು. ನನ್ನ ಕಣ್ಣುಗಳೇ ನೋಡುವುದನ್ನೂ 'ಕೇಳುವುದನ್ನೂ' ಮಾಡುತ್ತಿದ್ದವು.

ದೀಪದ ಬೆಳಕಿನಲ್ಲಿ ಅವಳು ಎಷ್ಟು ಸುಂದರವಾಗಿ ಹೊಳೆಯುತ್ತಾಳೆ. ಸೌಂದರ್ಯಕ್ಕೂ ದೀಪದ ಬೆಳಕಿಗೂ ಏನೋ ಸಂಬಂಧ ಇದೆ. ತರಕಾರಿಗೆ ಉಪ್ಪಿನ ಹಾಗೆ ಸೌಂದರ್ಯಕ್ಕೆ ಹೆಚ್ಚಿನ ರುಚಿಯನ್ನು ದೀಪ ಸೇರಿಸುತ್ತದೆಯೋ ಏನೋ!

ಕಣ್ಣು ಸೊರಗಿ ತನ್ನಷ್ಟಕ್ಕೆ ಮುಚ್ಚಿಕೊಳ್ಳುತ್ತದೆ.

***

